

# ಶ್ಯೇನ ಹಕ್ಕಿ ಶರವೇಗದ ಬೇಟೆಗಾರ

**'ಬಲಿಷ್ಠ ಬೇಟೆಗಾರ' ಶ್ಯೇನ ಹಕ್ಕಿ, ನೆಲಗುಬ್ಬಿಯನ್ನು ಭಕ್ಷಿಸಿದ ಶಿಕಾರಿಯ ಕಥನ.**

**■ ಶಶಿಧರಸ್ವಾಮಿ ಆರ್‌ ಹಿರೇಮಠ**

ರಾಜಸ್ಥಾನದ ಜೈಸಲ್ಮೇರ್ ಸಮೀಪದ ಡೆಸರ್ಟ್ ನ್ಯಾಷನಲ್ ಪಾರ್ಕಿನಲ್ಲಿ ಜೀಪಿನಲ್ಲಿ ಪಯಣ. ಕಣ್ಣು ಎಲ್ಲಿಯವರೆಗು ಹಾಯುವುದೋ ಅಷ್ಟೂ ಬರೀ ಮರಳು. ಅಲ್ಲಲ್ಲಿ ಕುರುಚಲು ಮರಗಳು. ಸಸ್ಯ ಹಾಗೂ ಪ್ರಾಣಿ ಸಂಕುಲಕ್ಕೆ ನೀರು ಒದಗಿಸಲಾರದಷ್ಟು ಒಣ ವಾತಾವರಣ.

ಅಭಯಾರಣ್ಯದಲ್ಲಿ ಜೀಪ್ ಸಾಗುತ್ತಿದ್ದಂತೆ ನೆಲದಿಂದ ನೆಲಗುಬ್ಬಿಗಳ ಗುಂಪು ಒಮ್ಮೆಲೆ ಪುರ್ರೆಂದು ಹಾರಿ ಚದುರಿ ಚೆಲ್ಲಾಪಿಲ್ಲಿಯಾಗಿ ಪೈಪೋಟಿಗಿಳಿದಂತೆ ಜೀಪನ್ನು ಹಿಂದಿಕ್ಕಿ ಹಾರುತ್ತಾ ಹೋದವು. ಯಾಕಿರಬೇಕೆಂಬ ಅನುಮಾನದಿಂದ ಕ್ಯಾಮೆರಾ ಕಣ್ಣಿನಿಂದ ಸುತ್ತಲೂ ನೋಡಿದೆ. ಅಲ್ಲೇ ಸಮೀಪದಲ್ಲಿ ಕುರುಚಲು ಮರದ ತುದಿಯಲ್ಲಿ ಕುಳಿತು ಬೇಟೆಗಾಗಿ ಹೊಂಚುಹಾಕುತ್ತಿದ್ದ 'ಶ್ಯೇನ' ಹಕ್ಕಿ ಬಾಲವನ್ನು ನೆಟ್ಟಗಾಗಿಸಿ ಬೇಟೆಗಾಗಿ ಹಾರಿದಾಗ ಎಚ್ಚೆತ್ತ ನೆಲಗುಬ್ಬಿಗಳು ಈ ರೀತಿ ಹಾರಿದ್ದವು.

'ಶ್ಯೇನ' ಹಕ್ಕಿ ಕೂಡ ಜೀಪನ್ನು ಹಿಂದಿಕ್ಕಿ ಶರವೇಗದಲ್ಲಿ ಹಾರುತ್ತಾ ನೆಲಗುಬ್ಬಿಗಳನ್ನು ಬೆನ್ನಟ್ಟಿ ಒಂದು ನೆಲಗುಬ್ಬಿಯ ಮೇಲೆ ಎರಗೇ ಬಿಟ್ಟಿತು. ತನ್ನ ಬಲಿಷ್ಠ ಉಗುರುಗಳಿಂದ ತಕ್ಷಣವೇ ಹಿಡಿದು ಒಂಟೆಯ ಒಣ ಲದ್ದಿಯ ಮೇಲೆ ಕುಳಿತು ಬೇಟೆಯ ಭಕ್ಷಣೆಗೆ ಅಣಿಯಾಯಿತು.

ಮೊದಲು ನೆಲಗುಬ್ಬಿಯ ಕೊಕ್ಕನ್ನು ತನ್ನ ಕೊಕ್ಕಿನಿಂದ ಎಳೆದು ಕತ್ತರಿಸುವ ಮೂಲಕ ತಿನ್ನಲು ಪ್ರಾರಂಭಿಸಿತು. ಉಗುರುಗಳ ಸಹಾಯದಿಂದ ಬಿಗಿಯಾಗಿ ಹಿಡಿದು ದೇಹವನ್ನು ಎಳೆದು ತುಂಡರಿಸುತ್ತಾ ಆಸ್ವಾದಿಸತೊಡಗಿತು. ನೆಲಗುಬ್ಬಿಯ ಪುಕ್ಕಗಳು ಕಿತ್ತು ಚೆಲ್ಲಾಪಿಲ್ಲಿಯಾಗುತ್ತಿದ್ದಂತೆ ಒಂದೊಂದೇ ಎಳೆಯಂತೆ ಅದರ ದೇಹವನ್ನು ಎಳೆದು ತುಂಡರಿಸಿ ತಿನ್ನುತ್ತಿತ್ತು. ಇಡೀ ದೇಹವನ್ನು ಸ್ವಾಹಾ ಮಾಡಿ ನೆಲಗುಬ್ಬಿಯ ಕಾಲು, ಕೊಕ್ಕು, ಪುಕ್ಕಗಳನ್ನು ಮಾತ್ರ ಬಿಟ್ಟು ಹಾರಿಹೋಯಿತು. ಈ ಉಪಾಹಾರ ಕಾರ್ಯಕ್ರಮ ಸುಮಾರು 21 ನಿಮಿಷಗಳು ನಡೆಯಿತು.



ಶ್ಯೇನ ಹಕ್ಕಿಯನ್ನು ಸಂಸ್ಕೃತದಲ್ಲಿ 'ಶಶಘ್ನಿ' ಎಂದು ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ ಮೆರ್ಲಿನ್ (Merlin) ಎಂದು ಕರೆದು, ವೈಜ್ಞಾನಿಕವಾಗಿ ಫಾಲ್ಕೊ ಕೊಲಂಬರಿಯಸ್ (Falco columbarius) ಎಂದು ಹೆಸರಿಸಲಾಗಿದೆ. ಫಾಲ್ಕೋನಿಫಾರ್ಮಿಸ್ (Falconiformes) ಗಣದ, ಫಾಲ್ಕೋನಿಡೇ (Falconidae) ಕುಟುಂಬಕ್ಕೆ ಸೇರಿಸಲಾಗಿದೆ.

ಶ್ಯೇನ ಹಕ್ಕಿಗಳು ಸಾಮಾನ್ಯವಾಗಿ 25ರಿಂದ 30 ಸೆಂ.ಮೀ. ಗಾತ್ರದಲ್ಲಿದ್ದು, ರೆಕ್ಕೆಗಳ ಹರಿವು 53–58 ಸೆಂ.ಮೀ. (21–23 ಇಂಚು) ಅಗಲವಾಗಿರುತ್ತವೆ. ಗಂಡಿಗಿಂತ ಹೆಣ್ಣು ಹಕ್ಕಿ ಸ್ವಲ್ಪ ದೊಡ್ಡದಾಗಿರುತ್ತದೆ. ಸಾಮಾನ್ಯವಾಗಿ ಇವುಗಳ ಮೈ ಗಾಢ ಗೆರೆಗಳಿಂದ ಕೂಡಿರುತ್ತದೆ. ಗಂಡು–ಹೆಣ್ಣುಗಳ ಬಣ್ಣದಲ್ಲಿ ಸ್ವಲ್ಪ ಭಿನ್ನತೆ ಇರುವುದನ್ನು ಕಾಣಬಹುದು. ವಯಸ್ಕ ಗಂಡು ಹಕ್ಕಿಯು ನೀಲಿ–ಬೂದು ಬಣ್ಣದ ನೆತ್ತಿ ಹೊಂದಿದ್ದು, ಯಾವುದೇ ಗುರುತುಗಳಿರುವುದಿಲ್ಲ. ಮೇಲ್ಭಾಗ ಮತ್ತು ಬಾಲದಲ್ಲಿಯೂ ಅಗಲವಾದ ಕಪ್ಪು ಉಪ–ತುದಿ ಬಾಲ ಪಟ್ಟೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ಹೆಣ್ಣು ಮತ್ತು ಯುವಹಕ್ಕಿಗಳು ಕಂದು ಬಣ್ಣದಲ್ಲಿರುತ್ತವೆ. ಎದೆ ಭಾಗವು ಹೆಚ್ಚು ಗೆರೆಗಳನ್ನು ಹೊಂದಿರುತ್ತದೆ ಮತ್ತು ರೆಕ್ಕೆಗಳ ಕೆಳಭಾಗ ಗಾಢವಾಗಿರುತ್ತದೆ. ಕಪ್ಪು ಬಾಲವು ಕಿರಿದಾದ ಬಿಳಿ ಪಟ್ಟೆಗಳನ್ನು ಹೊಂದಿರುತ್ತದೆ.

### ಶರವೇಗದ ಹಾರಾಟಗಾರ

ಶ್ಯೇನ ಹಕ್ಕಿಗಳು ಉಗ್ರ, ಶಕ್ತಿಯುತ ಬೇಟೆಗಾರ ಹಕ್ಕಿಗಳು. ಮರಳುಗಾಡಿನ ತೆರೆದ ಪ್ರದೇಶಗಳಲ್ಲಿನ ಕುರುಚಲು ಮರಗಳಲ್ಲಿ ಹೆಚ್ಚು ಕಂಡುಬರುತ್ತವೆ. ದೀರ್ಘಕಾಲ ಬೇಟೆ ವೀಕ್ಷಣೆಯಲ್ಲಿ ತೊಡಗಿರುತ್ತವೆ. ಸಣ್ಣ ಪಕ್ಷಿಗಳ (ಕೆಲವೊಮ್ಮೆ ಕೂಡತೆ ನೊಣಗಳನ್ನು) ಬೇಟೆ ಹುಡುಕುತ್ತಾ ಗಸ್ತು ತಿರುಗುತ್ತವೆ. ಶಕ್ತಿಯುತವಾಗಿ ಶರವೇಗದಲ್ಲಿ ಹಾರುತ್ತವೆ. ಇವುಗಳ ವಿಶಿಷ್ಟ ಹಾರಾಟದ ವೇಗವು ಗಂಟೆಗೆ ಸುಮಾರು 30 ಮೈಲುಗಳು. ಬೇಟೆಯನ್ನು ಬೆನ್ನಟ್ಟುವ ಸಮಯದಲ್ಲಿ ಗಂಟೆಗೆ 45 ಮೈಲುಗಳಿಗಿಂತ ಹೆಚ್ಚಿನ ವೇಗ ತಲುಪುತ್ತವೆ. ತೆರೆದ ಪ್ರದೇಶ, ಕೃಷಿ ಮತ್ತು ಮರುಭೂಮಿ ಪ್ರದೇಶದ ಪೊದೆಗಳಲ್ಲಿ ವಿರಮಿಸುವುದನ್ನು ವಿರಳವಾಗಿ ಕಾಣಬಹುದು. ಇವು ಚಳಿಗಾಲದ ವಲಸೆಗಾರ ಹಕ್ಕಿಗಳು. ■